ಜಗದ್ಗುರು ಶ್ರೀ ಶಿವರಾತ್ರೀಶ್ವರ ಮಹಾವಿದ್ಯಾಪೀಠ
ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು

ಅರ್ಥ ಅಕ್ಯಾಡೆಮಿ, ಬೆಂಗಳೂರು ಅರ್ಪಿಸುವ



# ಕಾಯಕ ತಪಸ್ವಿ

## ದೃಶ್ಯ-ನಾಟ್ಯ-ಸಂಗಮ

(ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳರವರ ಜೀವನಾಧಾರಿತ ಕಥಾನಕ)

**23 ಸೆಪ್ಟೆಂಬರ್ 2019 * ಸೋಮವಾರ * ಸಂಜೆ 6.00**

**ಕಲಾಮಂದಿರ * ಮೈಸೂರು**

ದಿವ್ಯ ಸಾನ್ನಿಧ್ಯ

ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳು
ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಸುತ್ತೂರು ಶ್ರೀಕ್ಷೇತ್ರ

ಅಧ್ಯಕ್ಷತೆ

ಶ್ರೀ ಪ್ರತಾಪ ಸಿಂಹ
ಲೋಕಸಭಾ ಸದಸ್ಯರು

ಮುಖ್ಯ ಅತಿಥಿಗಳು

ಶ್ರೀ ಜಿ.ಟಿ. ದೇವೇಗೌಡ
ಶಾಸಕರು ಮತ್ತು ಮಾಜಿ ಸಚಿವರು

ಶ್ರೀ ತನ್ವೀರ್ ಸೇಠ್
ಶಾಸಕರು ಮತ್ತು ಮಾಜಿ ಸಚಿವರು

ಶ್ರೀ ಎಸ್.ಎ. ರಾಮದಾಸ್
ಶಾಸಕರು ಮತ್ತು ಮಾಜಿ ಸಚಿವರು

ಶ್ರೀ ಎಲ್. ನಾಗೇಂದ್ರ
ಶಾಸಕರು

ಸರ್ವರಿಗೂ ಹಾರ್ದಿಕ ಸ್ವಾಗತ

ಸುತ್ತೂರು ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠದ 23ನೆಯ ಪೀಠಾಧೀಶ್ವರರಾದ ಶ್ರೀಮನ್ಮಹಾರಾಜ ರಾಜಗುರುತಿಲಕ ಪರಮಪೂಜ್ಯ ಜಗದ್ಗುರು ಡಾ. ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರು ಧಾರ್ಮಿಕ ಮಠ ಪರಂಪರೆಗೆ ಒಂದು ವಿಶೇಷ ಆಯಾಮವನ್ನು ತಂದುಕೊಟ್ಟವರು. ಧರ್ಮದ ಆಚಾರವಿಚಾರಗಳಿಗೆ ಸೀಮಿತಗೊಳ್ಳದೆ, ಸಮಾಜಮುಖಿ ಚಿಂತನೆಯಿಂದ ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಉಚಿತ ವಿದ್ಯಾರ್ಥಿನಿಲಯ ಪ್ರಾರಂಭಿಸಿ ನೂರಾರು ಶಾಲಾ ಕಾಲೇಜು, ತಾಂತ್ರಿಕ, ವೈದ್ಯಕೀಯ ಮಹಾ ವಿದ್ಯಾಲಯಗಳು, ಆರೋಗ್ಯಸೇವೆ, ಗ್ರಂಥ ಪ್ರಕಟಣೆ, ಧಾರ್ಮಿಕ ದತ್ತಿ ಸ್ಥಾಪನೆ, ಕೃಷಿ, ಸಂಗೀತ, ಸಾಂಸ್ಕೃತಿಕ ಚಟುವಟಿಕೆ ಮುಂತಾದ ಕ್ಷೇತ್ರಗಳಲ್ಲಿ ನೀಡಿದ  ಕೊಡುಗೆಗಳು ಅವಿಸ್ಮರಣೀಯ.

ತ್ರಿವಿಧ ದಾಸೋಹಗಳನ್ನೇ ಧ್ಯಾನ, ಪೂಜೆ, ತಪಸ್ಸು ಎಂದು ಪರಿಭಾವಿಸಿದ್ದ ಶ್ರೀಗಳವರ ಜೀವನವೇ ಒಂದು ಸಂದೇಶ. ತಾವು ಬದುಕಿದ್ದ ಪ್ರತಿ ಕ್ಷಣ ಪರಹಿತ ಬಯಸಿ ಜ್ಯೋತಿಯಾಗಿ 'ಕಾಯಕ ತಪಸ್ವಿ'ಯಾದರು.

ಪರಮಪೂಜ್ಯರ ಜೀವನಾದರ್ಶನವನ್ನು ಸಂಗೀತ, ನೃತ್ಯ ಹಾಗೂ ನಾಟಕ ಸಂಗಮಗಳ ಮುಖಾಂತರ ಧ್ವನಿಬೆಳಕಿನ ವಿಶಿಷ್ಟ ರಂಗವಿನ್ಯಾಸದೊಡನೆ ಜನಸಮುದಾಯದತ್ತ ಕೊಂಡೊಯ್ಯಬೇಕೆಂಬ ಉದ್ದೇಶದಿಂದ ಬೆಂಗಳೂರಿನ ಅರ್ಥ ಅಕಾಡೆಮಿ ವತಿಯಿಂದ ಪ್ರಯೋಗಗೊಳ್ಳುತ್ತಿದೆ.

ಬೆಂಗಳೂರಿನ ಕೇಂದ್ರ ವಿಶ್ವವಿದ್ಯಾಲಯದಿಂದ ಅಂಗೀಕೃತಗೊಂಡಿರುವ ಎಲಿಮೆಂಟ್ಸ್ ಆಫ್ ಆರ್ಟ್ಸ್ ಅಂಡ್ ಹೆರಿಟೇಜ್ ಅಕಾಡೆಮಿ(EARTHA) ಪ್ರದರ್ಶಕ ಕಲೆಗಳ ಪದವಿ ಕಾಲೇಜು ನಿರ್ದೇಶಕರಾದ ಶ್ರೀಮತಿ ರೂಪಾ ರವೀಂದ್ರನ್ ಕಥಕ್ ಕೊರಿಯೋಗ್ರಫಿಯಲ್ಲಿ ಪದವಿ ಹಾಗೂ ಭರತನಾಟ್ಯದಲ್ಲಿ ಎಂ.ಎ. ಪದವೀಧರರಾಗಿದ್ದು ಡಾ. ಮಾಯಾ ರಾವ್, ಪಂ. ರಾಜೇಂದ್ರ ಗಂಗಾನಿ ಹಾಗೂ ಡಾ. ಸುಪರ್ಣ ವೆಂಕಟೇಶ್ ಇವರ ಶಿಷ್ಯೆಯಾಗಿರುತ್ತಾರೆ. ಬಾಲನಟಿಯಾಗಿ ನೃತ್ಯ ಸಂಯೋಜಕಿಯಾಗಿ ದೇಶವಲ್ಲದೆ ಸುಮಾರು 13 ವಿದೇಶಿ ನೆಲದಲ್ಲಿ ತಮ್ಮ ಕಲಾ ಪ್ರೌಢಿಮೆ ಮೆರೆದಿರುತ್ತಾರೆ. ಬಾಲನಟಿಯಾಗಿ, ನಿರ್ಮಾಪಕಿಯಾಗಿ, ಹಿರಿ ಮತ್ತು ಕಿರು ತೆರೆಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿರುವ ಇವರು ಸಮಾಜಸೇವೆಯತ್ತ ಅಪಾರ ಒಲವನ್ನು ಹೊಂದಿದ್ದು 'ಕಾಯಕ ತಪಸ್ವಿ' ನೃತ್ಯ ಸಂಯೋಜನೆ, ನಿರ್ದೇಶನ ಮಾಡಿರುತ್ತಾರೆ.

ಗಾಯಕರು, ಕಲಾವಿದರು, ಮಾಜಿ ಶಾಸಕರಾದ ಶ್ರೀ ಎಸ್. ಬಾಲರಾಜ್ ಸಾವಿರಾರು ವೇದಿಕೆಗಳಲ್ಲಿ ತಮ್ಮ ಪ್ರತಿಭೆಯನ್ನು ಮೆರೆದಿದ್ದು 'ಕಾಯಕ ತಪಸ್ವಿ'ಯ ದೃಶ್ಯ ನಾಟ್ಯ ಸಂಗಮ ಇವರ ಪರಿಕಲ್ಪನೆಯಲ್ಲಿ ರಂಗವಿನ್ಯಾಸದೊಡನೆ ಮೂಡಿಬಂದಿದೆ.

ಸಾಹಿತಿ ಶ್ರೀ ರವಿ ಕುಮಾರನಪುರ ಇವರ  ಕೃತಿ ರಚನೆ ಹಾಗೂ ಸಂಗೀತ ನಿರ್ದೇಶಕ ಶ್ರೀ ಮಹೇಂದರ್ ದಾಸ್ ಇವರು ರಾಗ ಸಂಯೋಜನೆ ಮಾಡಿರುತ್ತಾರೆ.